Sri A. R. BADARINARAYANA.—The Hon'ble Member will appreciate that South Kanara District is a highly literate District and a number of students have to join Junior Colleges. If the conditions in Gulbarga District are similar, it will be treated alike.

Smt. WINNIFRED F. FERNANDES.—To my question (c) you have replied : 'To avoid retrenchment of excess staff, a proposal to relax the strength of the schools which have not been permitted to be converted into Junior Colleges, is under examination.' What is the strength required for each class ?

Sri A. R. BADARINARAYANA.—For each lecturer, there should be at least about 40 students. If there are no requisite number of students, it will not be a viable unit and it will be unnecessarily expensive for the Government and also for the private managements.

PROTECTED DRINKING WATER SUPPLY IN SADALGA CONSTITUENCY.

162. Sri J. S. AMMANNAVAR (Sadalga).—

Will the Minister for Community Development and Social Welfare be pleased to state :—

(*a*) the names of the villages having protected drinking water supply, under N.R.W.S.S. or other schemes in Sadalga Constituency of Chikodi Taluk, Belgaum District ;

(*b*) the names of the villages for which the plans and estimates are ready and the names of the schemes that are sanctioned ;

(*c*) whether there is any proposal before the Government to have protected drinking water supply scheme to the villages that are periodically affected by epidemics like cholera, even without the popular contribution ;

(*d*) if so, the names of such villages selected from the Sadalga Constituency ?

Sri M. MALLIKARJUNASWAMY (Minister for Community Development and Social Welfare).—

(*a*) Bhoj in Chikodi Taluk.

(*b*) Plans and estimates are ready in respect of (1) Karadga, (2) Kongnoli, (3) Soundalga and (4) Bedihal. Schemes are sanctioned to benefit six villages, *viz.*, Shiradwad-Janwad ; Sadalga ; Examba ; Shamnavadi and Galatga.

(*c*) No.

(*d*) Does not arise.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಸ್ವಾಮಿ ನಮ್ಮ ಸದಲಗ ಚುನಾವಣಾ ಕ್ಷೇತ್ರಕ್ಕೆ ಸಂಬಂಧಪಟ್ಟ ಶಿರದವಾಡ್, ಜನ್‌ವಾಡ್, ಸದಲಗ, ಎಕ್ಸ್‌ಂಬಿ ಶಾಮನವಾಡಿ ಹಾಗೂ ಗತಲಗ ಗ್ರಾಮಗಳ ಜನಗಳು ತಮ್ಮ ಭಾಗದ 10 ಪರ್ಸೆಂಟ್ ವಂತಿಕೆಯನ್ನು ತುಂಬಿ ಎರಡು ವರ್ಷ ಗಳಾಯಿತು. ಆದರೂ ಸಹ ಆ ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಮಾಡಿಲ್ಲ. ಆ ಯೋಜನೆಯನ್ನು ಯಾವಾಗ ಕಾರ್ಯಗತ ಮಾಡಿ ಆ ಗ್ರಾಮಗಳಿಗೆ ಯಾವಾಗ ನೀರು ಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಸದಲಗ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ 5 ವಾಟರ್ ಸಪ್ಲೈ ಸ್ಕೀಮುಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಸದಲಗ ಮತ್ತು ಶಾಮವಾಡಿ ಗ್ರಾಮಗಳಿಗೆ ನೀರು ಸರಬರಾಜು ಮಾಡಲು 2 ಲಕ್ಷ 37 ಸಾವಿರ ರೂಪಾಯಿಗಳ ಒಂದು ಅಂದಾಜು ಮಂಜೂರಾಗಿದೆ. ಆದರೆ ಅಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಆಗಿಲ್ಲ ಏತಕ್ಕೆಂದರೆ ಅಲ್ಲಿ ಒಂದು ಅಲ್ಟರ್‌ನೇಟೀವ್ ಪ್ರಪೋಜಲ್ಸ್ ಮಾಡಿ ಹೆಡ್ ವರ್ಕ್ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಉದ್ಭವವಾಯಿತು. ಆದ್ದರಿಂದ ಅಲ್ಲಿ ಇನ್ನೂ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಲ್ಲ. ಅದನ್ನು ಬೇಗ ಫೈನಲೈಜ್ ಮಾಡಿ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ಕಾರ್ಯಕ್ರಮ ವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಈಗಾಗಲೇ ನಮ್ಮ ಚುನಾವಣಾ ಕ್ಷೇತ್ರದಲ್ಲಿ ನೀರು ಸರಬರಾಜು ಪಡೆದಿರುವ ಕೆಲವು ಗ್ರಾಮಗಳಲ್ಲಿ ಸಿಮೆಂಟ್ ಪೈಪ್ ಹಾಕಿರುವುದರಿಂದ ಅದು ಕೆಲವು ಕಡೆ ಒಡೆದು ತಿಪ್ಪೆಗುಂಡಿಯ ನೀರು ಪರ್‌ಕ್ಯುಲೇಟ್ ಆಗಿ ಜನಗಳಿಗೆ ಕಾಮಿನಿ ಎಂಬ ರೋಗ ಬಂದು ಜನಗಳು ಕೊಂದರೆ ಪಡುತ್ತಿದ್ದಾರೆ. ಆದ್ದರಿಂದ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ರೀತಿ ಆಗಿದ್ದರೆ ಅದನ್ನು ಸರಿಪಡಿಸಿ ಒಳ್ಳೆಯ ನೀರು ಹೋಗುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಈಗ ನಾನು ಅದನ್ನು ತಮ್ಮ ಜನರಿಗೆ ತಂದಿದ್ದೇನೆ. ಅದನ್ನು ತಾವು ಸರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಸರಿಪಡಿಸುತ್ತೇವೆ.

ಶ್ರೀ ಪಿ. ಟಿ. ಗುತ್ತೆದಾರ.—ಸ್ವಾಮಿ ಈ ಪ್ರಶ್ನೆಯಲ್ಲಿ ಅಗಾಗ್ಯೆ ಕಾಲರಾವಂತಹ ಸಾಂಕ್ರಾಮಿಕ ರೋಗಪೀಡಿತ ಗ್ರಾಮಗಳಿಗೆ ಸಾರ್ವಜನಿಕ ಮಾತಿಕೆ ಇಲ್ಲದೆಯೇ ಶೋಧಿಸಿದ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನೊದಗಿಸುವ ಬಗ್ಗೆ ಸುಲಹೆ ಏನಾದರೂ ಸರ್ಕಾರ ದವರಲ್ಲಿದೆಯೇ ಎಂದು ಕೇಳಿದ್ದಕ್ಕೆ ತಾವು ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ಕುಡಿಯುವ ನೀರನ್ನು, ಸರಬರಾಜು ಮಾಡುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ನಿಜವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೇಂದ್ರ ಸರ್ಕಾರದವರು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡುವ ದೃಷ್ಟಿಯಿಂದ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಆ ಕಣವನ್ನು ನಾವು ನಿಜವಾಗಿಯೂ ಬಹಳವಾಗಿ ನೀರಿನ ತೊಂದರೆ ಇರುವ ಕಡೆ ನೀರನ್ನು ಸರಬರಾಜು ಮಾಡಲು ಕೆಲಸಗಳನ್ನು ತೆಗೆದು ಕೊಂಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ —ಎಲ್ಲಾ ಕಡೆಗಳಲ್ಲಿಯೂ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಗಳಿಗೆ ಸಂಬಂಧಪಟ್ಟ ಎಸ್ಟಿಮೇಟನ್ನು ಸಂಬಂಧಪಟ್ಟ ಇಲಾಖೆಯವರಿಗೆ ಮಂಜೂರಾತಿಗಾಗಿ ಕಳುಹಿಸಿದ್ದಾರೆ. ಆದರೆ ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನರುಗಳು ಫೈನಾಷಿಯಲ್ ಸೌಂಡನೆಸ್ ಸರ್ಟಿಫಿಕೇಟುಗಳನ್ನು ಕೊಡದೇ ಇರುವುದರಿಂದ ಆ ಎಸ್ಟಿಮೇಟನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲ ಎಂದು ಅನೇಕ ಕಾಗದಗಳು ಬರುತ್ತಿವೆ. ಆದ್ದರಿಂದ ಪ್ರಯಾರಿಟಿ ಬೇಸಿಸ್ ಮೇರೆ ಇಷ್ಟು ವಿವರಗಳಲ್ಲಿ ಆಯಾ ಸಂಬಂಧಪಟ್ಟ ಡೆಪ್ಯುಟಿ ಕಮಿಷನರುಗಳು ಫೈನಾನ್ಷಿಯರ್ ಸೌಂಡ್‌ನೆಸ್ ಸರ್ಟಿಫಿಕೇಟ್ ಕೊಡಬೇಕೆಂದು ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೂ ತಾವು ನಿರ್ದೇಶನ ಕೊಡುತ್ತೀರಾ ?

ಅಧ್ಯಕ್ಷರು.—ಇದು ತಾವು ಎಲ್ಲಾ ಕಡೆಗೂ ಅನ್ವಯಿಸುವ ಹಾಗೆ ಪ್ರಶ್ನೆಯನ್ನು ಕೇಳುತ್ತಿದ್ದೀರಿ, ಯಾವುದಾದರೂ ಒಂದು ಪರ್ಟಿಕ್ಯುಲರ್ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡಬಹುದು. ಆದ್ದರಿಂದ ಇದಕ್ಕೆ ಉತ್ತರ ಕೊಡುವುದು ಕಷ್ಟ.

Sri M. MALLIKARJUNA SWAMY.—That is too general a question. Let the Hon'ble Member put a specific question. I will answer it.

MEDICAL ALLOWANCES TO GOVERNMENT EMPLOYEES

257. Sri G. PUTTASWAMI (Mudigere).—

Will the Minister for Finance be pleased to state:—

(*a*) whether it has come to the notice of the Government that 70 per cent of the Government servants are drawing on an average of Rs. 100 per month by presenting false medical bills and misusing the medical facilities granted to them;

(*b*) if so, whether the Government contemplate to prevent this misuse and grant a medical allowance of Rs. 8 and Rs. 10 per month as recommended by the Tukol Pay Commission;

(*c*) the difficulties the Government have in implementing the recommendation of Tukol Pay Commission and in not allowing this facility to be the monopoly of the few?

Sri M. Y. GHORPADE (Minister for Finance).—

(*a*) No.

(*b*) Does not arise in view of reply furnished above.

(*c*) The present Medical Attendance Rules are quite liberal and are framed with a view to provide medical facilities to all the Government servants who are in need of it. If the Medical allowance is paid as per the recommendations of Tukol Pay Commission the Government will have to bear the additional burden of Rs. 177 lakhs per annum. In addition, even if the medical allowance is granted their getting free medical facilities available to public in Government Hospitals cannot be prevented. Keeping in view the present financial position of the State it has been decided that it is not possible to accept the recommendations of the Pay Commission regarding the grant of medical allowance to all the Government employees.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರಿ ನೌಕರರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವುದಕ್ಕೆ ಇದುವರೆಗೆ ಒಂದು ವರ್ಷಕ್ಕೆ ಎಷ್ಟು ಹಣ ಖರ್ಚಾಗುತ್ತಿತ್ತೆ ಎಂಬುದನ್ನು ಹೇಳುತ್ತೀರಾ?

†ಶ್ರೀ ಎಂ. ವೈ. ಘೋರ್ಪಡೆ.—ಇದಕ್ಕೆ 1961-62ನೇ ಸಾಲಿನಲ್ಲಿ 1 ಲಕ್ಷ 53 ಸಾವಿರ ರೂಪಾಯಿಗಳು ಖರ್ಚಾಗಿತ್ತು. 1962-63ನೇ ಸಾಲಿನಲ್ಲಿ 3 ಲಕ್ಷ 87 ಸಾವಿರ ರೂಪಾಯಿಗಳು ಖರ್ಚಾಗಿತ್ತು. ಆನಂತರ ಅದು ಆದರೆ ಆಲೋಯನ್ಸ್‌ನಲ್ಲಿ ಸೇರಿದೆ. ಆದಕಾರಣ ಅದರ ಪ್ರತ್ಯೇಕವಾದ ಅಂಕಿಯನ್ನು ಕೊಡುವುದಕ್ಕೆ ಆಗದಿದ್ದರೂ ಕೂಡ ಸ್ವಲ್ಪ ಕೆಟ್ಟು ಕಡಿಮೆ ಅಂದಾಜಾಗಿ 12 ರಿಂದ 15 ಲಕ್ಷ ರೂಪಾಯಿಗಳು ಒಂದು ವರ್ಷಕ್ಕೆ ಖರ್ಚಾಗಬಹುದು.